


ಎಡದಿಂದ ಬಲಕ್ಕೆ:

1. ಅವನು ಮಂಡಿಸಿದ ಇಡೀ ವಾದದ ಭಾಷಾಂತರ ಕಾರ್ಯ ನಡೆದಿದೆ (4)
3. ಅಲ್ಲಿ ತೋರಿಸಿದ ದೃಶ್ಯವನ್ನು ಕಂಡು ಮನದ ದೃಢತೆಯೇ ಹಿಂದು ಮುಂದಾಯಿತು (3)
4. ಮರೆಯಲಾರದ ಆ ಅನುಭವ, ಎಂಥ ಸಿಹಿ ! (3)
6. ಸ್ವಾರಸ್ಯವನ್ನೆಲ್ಲ ತೆರೆದಿಟ್ಟಂತಹ ಮಧುರ ಪ್ರಯಾಣ (4)
7. ಕಳ್ಳಿಯ ಕೈಗೆ ಸಿಗುವಂತಾಯಿತು ವೀಳ್ಯದೆಲೆ ಕಟ್ಟು (4)
8. ಹಾರೈಕೆಯನ್ನು ನಿರಾಕರಿಸುವುದು ನಷ್ಟ ತಂದೀತು (4)
10. ಮಡಿಸಿಟ್ಟದ್ದನ್ನೆಲ್ಲ ಕೆಡಿಸಿಟ್ಟದ್ದಕ್ಕೆ ಆಕೆಗೆ ಇಂಥ ಕೋಪ (4)
12. ಪೊರಕೆಯನ್ನು ಮಾರುತ್ತಿರುವಾತ ನಮ್ಮವನಲ್ಲವೇ ಅಲ್ಲ (4)
14. ಹೆದ್ದಾರಿಯನ್ನು ಹೊಕ್ಕಿದ್ದಾಯಿತು, ಆ ಪಯಣಿಗ (4)
16. ಸಾಮಾನ್ಯರ ಜೊತೆ ಜೊತೆಯಲ್ಲೇ ಯಾರೀತ ಇಷ್ಟು ಒಳ್ಳೆಯ ಮನುಷ್ಯ?(3)
17. ಪದ್ಯವನ್ನು ವಾಚಿಸಿದ ನಂತರ ದೀಪವನ್ನು ಬೆಳಗುವುದೇ ? (3)
18. ಮಾಸುವ ಮುನ್ನವೇ ಕಾಣಬನ್ನಿ, ಇದು ಅಡವಿ ಹೂವು (4)

ಮೇಲಿಂದ ಕೆಳಕ್ಕೆ:

1. ಆಸ್ತಿ ಇದ್ದರೇನು ? ಅದೇನೂ ಶಾಶ್ವತವಲ್ಲ ತಾನೇ ? (3)
2. ಧೂಮಪಾನದ ದುರಭ್ಯಾಸವನ್ನು ಹತ್ತಿಕ್ಕುವುದೇ ಸರಿ (3)
3. ತಾಳಿಕೆ ಇಲ್ಲದ ಕೆಲಸ ಮಾಡಿದ್ದಕ್ಕೆ ಬರೀ ಅವಹೇಳನ (4)
5. ಜ್ವರ ನಿವಾರಣೆಯಾಗುವ ವೇಳೆಗೆ ರಾತ್ರಿಯಾಗಿತ್ತು (3)
7. ಕಸವನ್ನಾರಿಸುವವರನ್ನು ಕಂಡರೇ ಆಕೆಗೆ ಏನೋ ಸಂಕಟ (4)
9. ರಾಮಾಯಣದ ಈ ದೃಶ್ಯಗಳು ಎಷ್ಟು ಸುಂದರ, ನೋಡಿ (4)
11. ಸುಗ್ಗಿ ಮುಗಿಯುವುದರೊಳಗೆ ಸ್ವಲ್ಪವಾದರೂ ಉಳಿವಂತೆ ಮಾಡು (3)
13. ಮಾನವರ ಇಂದಿನ ಮೂಲ ಅಗತ್ಯ ಒಂದಷ್ಟು ಆದಾಯ (4)
14. ವಿದ್ಯಾದಾನ ಮಾಡಲು ಬಂದವ ರಾಕ್ಷಸನಾಗಬಹುದೇ ? (3)
15. ಮುದುಕನಾದರೂ ಆತ ಎಂಥ ಘಾಟಿ ಮನುಷ್ಯ ಅಲ್ಲವೇ ? (3)

## 01-11-2018ರ ಉತ್ತರಗಳು

ಎಡದಿಂದ ಬಲಕ್ಕೆ :

1. ಪ್ರಸಾಧನ 3. ವಿಶಾಖ 4. ಯಜನ 6. ರಸಾಯನ 7. ಮಾಸಾಶನ 9. ಆಕಸ್ಮಿಕ 11. ವರ್ತಮಾನ 13. ಪರಧನ 15. ಸನ್ನಿವೇಶ 17. ನಿಷಾದ 18. ಮಸ್ತಕ 19. ನವಮಾನ (=ಹೊಸ ಅಳತೆ)

ಮೇಲಿಂದ ಕೆಳಕ್ಕೆ :

1. ಪ್ರಖರ 2. ನಯನ 3. ವಿದೇಶ 5. ನಡುಕ 7. ಮಾಧವ 8.ನಮನ 9. ಆಕ್ಷೇಪ 10. ಕಥನ 12. ಮಾನಿನಿ ; 14. ರಜಕ(= ಅಗಸ); 15. ಸದನ ; 16. ಶಮನ

# ಕಡಲ ಕಮಾನು: ಅದೇನು?

ಕಡಲಂಚಿನಲ್ಲಿ ಕಾಣಸಿಗುವ ಕಮಾನಿನ ರೂಪದ ನೈಸರ್ಗಿಕ ಶಿಲಾ ನಿರ್ಮಿತಿಯೇ 'ಕಡಲ ಕಮಾನು ( ಸೀ ಆರ್ಚ್)'. ಕಡಲ ತಡಿಯ ಶಿಲಾ ಸ್ತರಗಳಲ್ಲಿ ಸಾಗರದ ಅಲೆಗಳ ಪ್ರಬಲ ವಿಚ್ಛಿದ್ರಕ ಶಕ್ತಿಯ ಪರಿಣಾಮವಾಗಿ ಮೈದಳೆವ ಬಂಡೆ ಕಂಬ, ಗುಹೆ, ಸುರಂಗ, ಸೇತುವೆ ಇತ್ಯಾದಿ ರೂಪಗಳ ಹಲವು ವಿಧಗಳ ಪ್ರಾಕೃತಿಕ ಶಿಲಾ ಶಿಲ್ಪಗಳಲ್ಲೆಲ್ಲ ಕಡಲ ಕಮಾನುಗಳದು ಅತ್ಯಂತ ಆಕರ್ಷಕ, ವಿಸ್ಮಯಕರ ಸ್ವರೂಪ ( ಚಿತ್ರ 1 ಮತ್ತು 2 ರಲ್ಲಿ ಗಮನಿಸಿ ).

ಸಾಗರ ತೀರದ ಕೆಲವು ಪ್ರದೇಶಗಳಲ್ಲಿ ಸಾಗರದ ಅಂಚಿಗೆ ಸಮಾನಾಂತರವಾಗಿ ಮತ್ತು ಅಪರೂಪವಾಗಿ ಸಾಗರದಂಚಿಗೆ ಲಂಬವಾಗಿ ಕಡಲಿನೊಳಕ್ಕೆ ಚಾಚಿ ಉನ್ನತ ತಡೆಗೋಡೆಗಳಂತೆ ಶಿಲಾಸ್ತರಗಳು ಹಬ್ಬಿ ನಿಂತಿರುತ್ತವೆ. ರಾಶಿ ರಾಶಿ ಮರಳಿನ ಕಣಗಳನ್ನು ಹೊತ್ತು ತಂದು ಅವ್ಯಾಹತವಾಗಿ ಅಪ್ಪಳಿಸುವ ಅಲೆಗಳಿಂದಾಗಿ ಇಂಥ ಬಂಡೆಗೋಡೆಗಳು ನಿಧಾನವಾಗಿ ಸವೆಯುತ್ತವೆ ; ದುರ್ಬಲಗೊಂಡು ಅಲ್ಲಲ್ಲಿ ಬಿರುಕು ಬಿಡುತ್ತವೆ. ಜೊತೆಗೆ ಸಾಗರದಲೆಗಳ ಲವಣ ಜಲದ ನಿರಂತರ ಸ್ಪರ್ಶದಿಂದ ಕರಗುತ್ತವೆ ಕೂಡ.

ಅತ್ಯಂತ ಉಗ್ರ, ಬಲಿಷ್ಠ ಅಲೆಗಳು ಏಳುವ ಮತ್ತು ಉಬ್ಬರಇಳಿತಗಳು ತೀವ್ರವಾಗಿರುವ ಕಡಲದಂಡೆಗಳ ಬಂಡೆಗೋಡೆಗಳಲ್ಲಿನ ಜೇಡಿಶಿಲೆ, ಮರಳುಶಿಲೆ, ಸುಣ್ಣಶಿಲೆ ಇತ್ಯಾದಿ ಮೃದು ಶಿಲೆಗಳು ಸಹಜವಾಗಿಯೇ ಅಲೆಗಳ ಬಡಿತದಿಂದ ಕ್ಷಿಪ್ರವಾಗಿ ಸವೆಯುತ್ತವೆ ; ಕರಗುತ್ತವೆ. ಹತ್ತಾರು ಸಾವಿರ




ವರ್ಷಗಳ ಈ ಬಗೆಯ ನಿರಂತರ ಶಿಥಿಲೀಕರಣದಿಂದಾಗಿ ಅಂಥ ಶಿಲಾಗೋಡೆಗಳು ಅಲ್ಲಲ್ಲಿ ಕೊರೆಯಲ್ಪಟ್ಟು, ರಂಧ್ರಬಿದ್ದು, ಅಂತಹ ಹಲವಾರು ಅಕ್ಕಪಕ್ಕದ ರಂಧ್ರಗಳು ಸೇರ್ಪಡೆಗೊಂಡಾಗ ಕಮಾನಿನ ಆಕಾರದ ಅಥವಾ ಸೇತುವೆಯ ಆಕಾರದ ಭಾರೀ ತೆರಪು ಮೈದಳೆಯುತ್ತದೆ. ಅದೇ ಕಡಲ ಕಮಾನು ( ಚಿತ್ರ2 ). ಕಡಲಿನೊಳಕ್ಕೆ ಚಾಚಿದ ಬಂಡೆಗೋಡೆಗಳು ಇಕ್ಕೆಡೆಗಳಿಂದ ಅಲೆಗಳ ತಾಡನಕ್ಕೆ ಸಿಲುಕುತ್ತವೆ ; ಹಾಗಾಗಿ, ಅಂಥ ಗೋಡೆಗಳಲ್ಲಿ ಕಡಲ ಕಮಾನು ಹೆಚ್ಚು ಕ್ಷಿಪ್ರವಾಗಿ, ಇಮ್ಮಡಿ ವೇಗದಲ್ಲಿ ರೂಪುಗೊಳ್ಳುತ್ತದೆ (ಚಿತ್ರ2). ಬಹಳ ದಪ್ಪ ಇರುವ ಬಂಡೆಗೋಡೆಗಳಲ್ಲಿ ಗುಹೆಗಳೂ, ಸುರಂಗಗಳೂ ನಿರ್ಮಾಣಗೊಳ್ಳುತ್ತವೆ.

ಹೇಗೇ ಆದರೂ, ಲಕ್ಷಾಂತರ ವರ್ಷಗಳ ಅವಧಿಯಲ್ಲಿ ಮೈದಳೆದು ನಿಲ್ಲುವ, ಹಲವು ಹತ್ತು ಅಡಿಗಳಷ್ಟು ಅಗಲ, ಎತ್ತರಗಳ ಕಡಲ ಕಮಾನುಗಳು ಯಾರನ್ನಾದರೂ ಆಕರ್ಷಿಸಿ ಬೆರಗುಗೊಳಿಸುತ್ತವೆ. ಆದರೆ, ಸ್ಪಷ್ಟವಾಗಿಯೇ, ಉಳಿದೆಲ್ಲ ನೈಸರ್ಗಿಕ ಶಿಲಾ ಶಿಲ್ಪಗಳಂತೆಯೇ ಕಡಲ ಕಮಾನುಗಳದೂ ಭಂಗುರ ಅಸ್ತಿತ್ವ. ಅವುಗಳನ್ನು ಕಡೆದು ರೂಪಿಸುವ ಅಲೆಗಳ ಧಾಳಿಯಿಂದಲೇ ಈ ಕಮಾನುಗಳ ಶಿರ ಇಲ್ಲವೇ ಅವುಗಳ ಇಕ್ಕೆಡೆಗಳ ಆಧಾರ ಸ್ತಂಭಗಳು ಒಂದಷ್ಟು ಕಾಲದಲ್ಲಿ ಮುರಿದು, ಕುಸಿದು ಬೀಳುತ್ತವೆ. ಆಗ ಕಮಾನು ಕಣ್ಮರೆಯಾಗುತ್ತದೆ.

■ ಎನ್. ವಾಸುದೇವ್